بِسۡمِ اللّٰہِ الرَّحۡمٰنِ الرَّحِیۡمِ

# ತಹ್‌ರೀಕ್ ಜದೀದ್ 84ನೇ ವರ್ಷದ ಶುಭಾರಂಭದ ಅನುಗ್ರಹೀತ ಘೋಷನೆ

ಕಳೆದ ವರ್ಷ ಅಹ್ಮದಿಯಾ ಜಮಾಅತ್ 1,25,80,000 ಪೌಂಡ್‌ನ ಸಾಂಪತ್ತಿಕ ತ್ಯಾಗವನ್ನು ಮಾಡಿದೆ.

**ಅಹ್ಮದಿಯಾ ಜಮಾಅತ್ ಭಾರತಕ್ಕೆ ಅಲ್ಲಾಹನ ಅನುಗ್ರಹದಿಂದ ಈ ವರ್ಷವೂ ತನ್ನ ವಿಶಿಷ್ಟವಾದ ಸ್ಥಾನವನ್ನು ನೆಲೆನಿಲ್ಲಿಸುವ ಸೌಭಾಗ್ಯ ಲಭಿಸಿದೆ.**

ತಹ್‌ರೀಕ್ ಜದೀದಿನಲ್ಲಿ ಭಾಗವಹಿಸುವವರಲ್ಲಿ ಇನ್ನೂ ವರ್ಧನೆ ಉಂಟುಮಾಡಲು ಸಾಕಷ್ಟು ಅವಕಾಶ ಮತ್ತು ಎಡೆಯಿದೆ.

ಜಮಾಅತಿನ ವ್ಯಕ್ತಿಗಳು ಮತ್ತು ಆಡಳಿತ ವರ್ಗ ಇದರ ಕಡೆಗೆ ವಿಶೇಷವಾದ ಗಮನಹರಿಸಲು ತಾಕೀತು.

ಮಸ್‌ಜಿದ್ ಬೈತುಲ್ ಫುತೂಹ್‌ನ ಕಾಂಪ್ಲೆಕ್ಸ್‌ನ ಬೆಂಕಿ ಹತ್ತಿದ ಭಾಗದ ಪುನರ್‌ನಿರ್ಮಾಣಕ್ಕಾಗಿ ಶ್ರೀಮಂತ ಅಹ್ಮದಿಯರಿಂದ ಸಾಂಪತ್ತಿಕ ತ್ಯಾಗಮಾಡಲು ಅಪೇಕ್ಷೆ

ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಲಂಡನಿನ 'ಬೈತುಲ್ ಫುತೂಹ್' ಮಸೀದಿಯಲ್ಲಿ 03–11–2017 ರಂದು ನೀಡಿದ ಜುಮುಅ ಖುತ್‌ಬ

اَشۡهَدُ اَنۡ لَّا اِلٰهَ اِلَّا اللّٰهُ وَحۡدَهٗ لَا شَرِيۡكَ لَهٗ وَ اَشۡهَدُ اَنَّ مُحَمَّدًا عَبۡدُهٗ وَ رَسُوۡلُهٗ-

اَمَّا بَعۡدُ فَاَعُوۡذُ بِاللّٰهِ مِنَ الشَّيۡطٰنِ الرَّجِيۡمِ- بِسۡمِ اللّٰهِ الرَّحۡمٰنِ الرَّحِيۡمِ [۱:۱]

اَلۡحَمۡدُ لِلّٰهِ رَبِّ الۡعٰلَمِيۡنَ [۱:۲] اَلرَّحۡمٰنِ الرَّحِيۡمِ [۱:۳] مٰلِكِ يَوۡمِ الدِّيۡنِ [۱:۴] اِيَّاكَ نَعۡبُدُ وَاِيَّاكَ نَسۡتَعِيۡنُ [۱:۵]
اِهۡدِنَا الصِّرَاطَ الۡمُسۡتَقِيۡمَ [۱:۶] صِرَاطَ الَّذِيۡنَ اَنۡعَمۡتَ عَلَيۡهِمۡ غَيۡرِ الۡمَغۡضُوۡبِ عَلَيۡهِمۡ وَلَا الضَّآلِّيۡنَ [۱:۷]

لَنۡ تَنَالُوا الۡبِرَّ حَتّٰى تُنۡفِقُوۡا مِمَّا تُحِبُّوۡنَ وَمَا تُنۡفِقُوۡا مِنۡ شَيۡءٍ فَاِنَّ اللّٰهَ بِهٖ عَلِيۡمٌ (آل عمران: ۹۳)

**ಲನ್ ತನಾಲುಲ್ ಬಿರ್ರ ಹತ್ತಾ ತುನ್‌ಫಿಖೂ ಮಿಮ್ಮಾ ತುಹಿಬ್ಬೂನ ವಮಾ ತುನ್‌ಫಿಖೂ ಮಿನ್ ಶೈಇನ್ ಫಇನ್ನಲ್ಲಾಹ ಬಿಹೀ ಅಲೀಮ್.**

ನಿಮಗೆ ಪ್ರಿಯವಾದವುಗಳಿಂದ (ದೇವಮಾರ್ಗದಲ್ಲಿ) ವ್ಯಯಿಸುವ ವರೆಗೆ

ನೀವು (ಪರಿಪೂರ್ಣ) ಒಳಿತನ್ನು ಗಳಿಸಲಾರಿರಿ. ನೀವು ಖರ್ಚು ಮಾಡುವುದನ್ನೆಲ್ಲ ಅಲ್ಲಾಹನು ಚೆನ್ನಾಗಿ ಬಲ್ಲನು. **(ಪವಿತ್ರ ಖುರ್‌ಆನ್ 3:93)**

ಈ ವಚನದಲ್ಲಿ ಅಲ್ಲಾಹನು ಹೇಳಿದ ವಿಷಯವನ್ನು ಯಾವಾಗಲೂ ಅಲ್ಲಾಹನ ಮಾರ್ಗದಲ್ಲಿ ತ್ಯಾಗಮಾಡುವ ಸತ್ಯವಿಶ್ವಾಸಿಗಳೇ ಉತ್ತಮ ರೀತಿಯಲ್ಲಿ ಮನವರಿಕೆ ಮಾಡಿರುವರು. ಇದನ್ನು ಅತ್ಯಂತ ಹೆಚ್ಚಿನ ಮಟ್ಟದಲ್ಲಿ ಕಾರ್ಯರೂಪಕ್ಕೆ ತಂದವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹಾಬರಾಗಿದ್ದರು. ಅವರು ತಮ್ಮ ಸಂಪತ್ತು, ತಮ್ಮ ಜೀವ ಮತ್ತು ಸಮಯವನ್ನು ಧರ್ಮಕ್ಕೋಸ್ಕರ ಅರ್ಪಿಸಿದರು. ಅವರು "**ಅಲ್‌ಬಿರ್ರ್**" (ಒಳಿತು) ಎಂಬ ಪದದ ವಾಸ್ತವಿಕ ಅರ್ಥವನ್ನು ಮನವರಿಕೆ ಮಾಡಿದವರಾಗಿದ್ದರು. ಅವರು ಒಳಿತಿನ, ದೇವಭಕ್ತಿಯ, ನೈತಿಕ ಗುಣಗಳ, ಸಾಂಪತ್ತಿಕ ತ್ಯಾಗದ ಮತ್ತು ಅಲ್ಲಾಹನ ಸಂಪ್ರೀತಿ ಗಳಿಸುವ ಅತ್ಯಂತ ಉನ್ನತ ಮಟ್ಟ ಯಾವುದೆಂದು ಮನವರಿಕೆ ಮಾಡಿಕೊಂಡರು ಮತ್ತು ಆ ಮಟ್ಟವನ್ನು ತಲಪಲು ಪ್ರಯತ್ನ ಮಾಡಿದರು. ಹದೀಸಿನಲ್ಲಿ ಹೀಗೆ ವರದಿಯಾಗಿದೆ: ಪವಿತ್ರ ಖುರ್‌ಆನಿನ ಈ ವಚನ ಅವತೀರ್ಣಗೊಂಡಾಗ ಹಝ್ರತ್ ಅಬೂತಲ್‌ಹ[ರ] ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪಕ್ಕೆ ಹೋಗಿ ಹೇಳಿದರು: "ಅಲ್ಲಾಹನ ಸಂದೇಶವಾಹಕರೇ, ನನಗೆ "**ಬೀರ್‌ಹಾ**" ಎಂಬ ಹೆಸರಿನ ಒಂದು ತೋಟವಿದೆ. (ಆ ತೋಟ ಮಸ್ಜಿದ್ ನಬ್‌ವಿಯ ಸಮೀಪದಲ್ಲೇ ಇತ್ತು.) ನನ್ನ ಸ್ಥಿರ ಸೊತ್ತುಗಳಲ್ಲಿ ನನಗೆ ಅತ್ಯಂತ ಪ್ರಿಯವಾದ ಈ ತೋಟವನ್ನು ನಾನು ಇಂದು ಅಲ್ಲಾಹನ ಮಾರ್ಗದಲ್ಲಿ ಸದಖವಾಗಿ ಕೊಡುತ್ತೇನೆ."

**(ಸಹೀಹ್ ಬುಖಾರಿ – ಕಿತಾಬು ತಫ್‌ಸೀರುಲ್ ಖುರ್‌ಆನ್; ಬಾಬ್ ಲನ್‌ತನಾಲುಲ್‌ಬಿರ್ರ್, ಹದೀಸ್ ನಂ. 4554)**

ಸಹಾಬರ ತ್ಯಾಗದ ಮಟ್ಟ ಇದಾಗಿತ್ತು. ಇಂದಿನ ಕಾಲದಲ್ಲಿ ಅಲ್ಲಾಹನ ಅನುಗ್ರಹದಿಂದ ಪ್ರತಿಯೊಂದು ವಿಧದ ತ್ಯಾಗದ ಬಗ್ಗೆ ಎಲ್ಲರಿಗಿಂತ ಹೆಚ್ಚು ಜ್ಞಾನವಿರುವುದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧನಾದ ಸೇವಕನಾದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬುವವರಿಗೆ ಮಾತ್ರವಾಗಿದೆ. ಅವುಗಳನ್ನು ಕಾರ್ಯರೂಪದಲ್ಲಿ ಪ್ರಕಟಿಸುತ್ತಿರುವುದು ಸಹ ಅಲ್ಲಾಹನ ಅನುಗ್ರಹದಿಂದ ಅಹ್ಮದಿಯರೇ ಆಗಿದ್ದಾರೆ. ಇಂದಿನ ಕಾಲದಲ್ಲಿ ಲೋಕದ ಜನರು ಸಂಪತ್ತು ಸಂಗ್ರಹಿಸುವ ಓಟದಲ್ಲಿ ನಿರತರಾಗಿರುವಾಗ ಅಹ್ಮದಿಯರಲ್ಲಿ ಬಹಳ ದೊಡ್ಡ ಸಂಖ್ಯೆಯ ಜನರು ಹೇಗಿದ್ದಾರೆಂದರೆ ಅವರು ಸಂಪಾದಿಸುವವರಾಗಿದ್ದರೂ ಸಾಂಪತ್ತಿಕ ತ್ಯಾಗದ ಬಗ್ಗೆ ಅವರ ಗಮನಸೆಳೆದಾಗ ಅವರು ತಮ್ಮ ಸಂಪತ್ತನ್ನು ಅರ್ಪಿಸುತ್ತಾರೆ. ಇದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ನಿರಂತರವಾದ ತರಬೇತಿಯ ಫಲಿತಾಂಶವಾಗಿದೆ.

ವಿವಿಧ ಸಂದರ್ಭಗಳಲ್ಲಿ, ವಿವಿಧ ರೀತಿಯಲ್ಲಿ, ವಿವಿಧ ನಿರ್ದೇಶನಗಳೊಂದಿಗೆ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮಗೆ ತ್ಯಾಗದ ಬಗ್ಗೆ ಉಪದೇಶಿಸಿರುವರು. ಅವರು ಹೇಳುತ್ತಾರೆ:

"ಮನುಷ್ಯನು ಲೋಕದಲ್ಲಿ ಸಂಪತ್ತನ್ನು ಎಲ್ಲದಕ್ಕಿಂತಲೂ ಹೆಚ್ಚಾಗಿ ಪ್ರೀತಿಸುತ್ತಾನೆ. ಕನಸಿನಲ್ಲಿ ಯಾರಾದರೂ ತನ್ನ ಯಕೃತ್ತನ್ನು ಕಿತ್ತು ಇತರರಿಗೆ ಕೊಡುವುದಾಗಿ ಕಂಡರೆ ಅದರ ಅರ್ಥ ಸಂಪತ್ತನ್ನು ಕೊಡುವುದಾಗಿದೆ ಎಂದು ಇದೇ ಕಾರಣದಿಂದ ಸ್ವಪ್ನ ವ್ಯಾಖ್ಯಾನ ಶಾಸ್ತ್ರದಲ್ಲಿ ಬರೆದಿದೆ, ಇದೇ ಕಾರಣದಿಂದ ವಾಸ್ತವಿಕ ತಖ್ವ ಮತ್ತು ಈಮಾನ್ ಗಳಿಕೆಗೆ ಆವಶ್ಯಕವಾದುದರ ಬಗ್ಗೆ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ. لَنۡ تَنَالُوا الۡبِرَّ حَتّٰی تُنۡفِقُوۡا مِمَّا تُحِبُّوۡنَ **ಲನ್ ತನಾಲುಲ್ ಬಿರ್ರ ಹತ್ತಾ ತುನ್‌ಫಿಖೂ ಮಿಮ್ಮಾ ತುಹಿಬ್ಬೂನ್**. (ನೀವು ನಿಮಗೆ ಅತ್ಯಂತ ಪ್ರಿಯವಾದುದನ್ನು ಖರ್ಚು ಮಾಡುವ ತನಕ ನೀವು ಒಳಿತನ್ನು ಗಳಿಸಲಾರಿರಿ) ಎಂದು ಹೇಳಿರುವನು. ಏಕೆಂದರೆ ಅಲ್ಲಾಹನ ಸೃಷ್ಟಿಗಳೊಂದಿಗೆ ಸಹಾನುಭೂತಿಯಿಂದ ವರ್ತಿಸುವುದಕ್ಕೆ ಸಂಬಂಧಿಸಿ ಮುಖ್ಯವಾದುದು ಅವರಿಗೋಸ್ಕರ ಸಂಪತ್ತನ್ನು ಖರ್ಚು ಮಾಡುವುದಾಗಿದೆ. ಮನುಷ್ಯ ವರ್ಗಕ್ಕೋಸ್ಕರ ಮತ್ತು ಅಲ್ಲಾಹನ ಸೃಷ್ಟಿಗಳಿಗೋಸ್ಕರ ಸಹಾನುಭೂತಿ ತೋರಿಸುವುದು ಎಂಬುದು ಸತ್ಯವಿಶ್ವಾಸದ ಎರಡನೆಯ ಭಾಗವಾಗಿದೆ. ಇದಿಲ್ಲದೆ ಸತ್ಯವಿಶ್ವಾಸವು ದೃಢವೂ ಪರಿಪೂರ್ಣವೂ ಆಗಲಾರದು. (ಸೃಷ್ಟಿಗಳ ಹಕ್ಕುಗಳನ್ನು ಈಡೇರಿಸುವುದು ಸಹ ವಿಶ್ವಾಸದ ಒಂದು ಭಾಗವಾಗಿದೆ.) ಅವುಗಳನ್ನು ಈಡೇರಿಸದೆ ಈಮಾನ್ ಪರಿಪೂರ್ಣವಾಗಲಾರದು. ಒಬ್ಬನು ತ್ಯಾಗ ಮನೋಭಾವ ಹೊಂದದಿದ್ದರೆ ಅವನು ಇನ್ನೊಬ್ಬನಿಗೆ ಹೇಗೆ ತಾನೆ ಲಾಭವನ್ನುಂಟು ಮಾಡಬಲ್ಲನು. (ಅನ್ಯರಿಗೆ ಲಾಭವನ್ನು ಉಂಟುಮಾಡಿ ಕೊಡಲು ಮತ್ತು ಸಹಾನುಭೂತಿ ತೋರಿಸಲು ತ್ಯಾಗ ಮನೋಭಾವ ಆವಶ್ಯಕವಾಗಿದೆ.) ಈ ಪವಿತ್ರ ಖುರ್‌ಆನ್ ವಚನದಲ್ಲಿ ತ್ಯಾಗ ಮಾಡುವ ಉಪದೇಶ ಮತ್ತು ಮಾರ್ಗದರ್ಶನ ನೀಡಲಾಗಿದೆ. ಆದುದರಿಂದ ಸಂಪತ್ತನ್ನು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವುದು ಮನುಷ್ಯನ ಸಾತ್ವಿಕತೆ ಮತ್ತು ತಖ್ವದ ಉನ್ನತ ಮಟ್ಟವೂ ಅದರ ಸುಗಂಧವೂ ಆಗಿದೆ. (ಸಾಂಪತ್ತಿಕ ತ್ಯಾಗವನ್ನು ನೋಡಿ ದೇವಭಕ್ತಿಯ ಮಟ್ಟವನ್ನು ಅಳತೆ ಮಾಡಲಾಗುತ್ತದೆ.) ಹಝ್ರತ್ ಅಬೂಬಕರರ(ರ) ಜೀವಿತದಲ್ಲಿ ಅವರು ಅಲ್ಲಾಹನ ಮಾರ್ಗದಲ್ಲಿ ಮಾಡಿದ ತ್ಯಾಗದ ಮಟ್ಟ ಹೇಗಿತ್ತೆಂದರೆ ಒಮ್ಮೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಂದು ಧಾರ್ಮಿಕ ಉದ್ದೇಶಕ್ಕೋಸ್ಕರ ಸಾಂಪತ್ತಿಕ ತ್ಯಾಗವನ್ನು ಆವಶ್ಯಪಟ್ಟಾಗ ಅವರು ತನ್ನ ಮನೆಯಲ್ಲಿದ್ದ ಎಲ್ಲ ವಸ್ತುಗಳನ್ನು ತೆಗೆದುಕೊಂಡು ಬಂದರು.

**(ಮಲ್‌ಫೂಝಾತ್ – ಭಾಗ 2, ಪುಟ 95 – 96)**

ಒಟ್ಟಿನಲ್ಲಿ, ಹಝ್ರತ್ ಅಬೂಬಕ್ಕರ್(ರ) ಮತ್ತು ಹಝ್ರತ್ ಉಮರ್(ರ) ಸ್ಥಾಪಿಸಿದ ಅತ್ಯುನ್ನತ ಮಟ್ಟ ಇದಾಗಿದೆ. ಹಝ್ರತ್ ಅಬೂಬಕ್ಕರ್ ತನ್ನ ಮನೆಯಲ್ಲಿದ್ದ ಎಲ್ಲ ವಸ್ತುಗಳನ್ನು ತೆಗೆದುಕೊಂಡು ಬಂದರು. ಹಝ್ರತ್

ಉಮರ್[ರ] ಮನೆಯಲ್ಲಿದ್ದ ಸಾಮಾನುಗಳಿಂದ ಅರ್ಧದಷ್ಟು ತೆಗೆದುಕೊಂಡು ಬಂದರು. ಅದೇ ರೀತಿಯಲ್ಲಿ ಇತರ ಸಹಾಬಿವರ್ಯರು ತಮ್ಮ ಸಾಮರ್ಥ್ಯಕ್ಕನುಸಾರ ತ್ಯಾಗಗಳನ್ನು ಮಾಡುತ್ತಿದ್ದರು.

ತ್ಯಾಗದ ಉದಾಹರಣೆಗಳನ್ನು ನೀಡುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತ್ಯಾಗದ ಇದೇ ಚೈತನ್ಯವನ್ನೂ ಮಟ್ಟವನ್ನೂ ನಮ್ಮಲ್ಲಿ ಉಂಟುಮಾಡಲು ಇಚ್ಛಿಸುತ್ತಾರೆ. ನಾನು ಹೇಳಿದಂತೆ ಬಹುತೇಕ ಅಹ್ಮದಿಯರು ತ್ಯಾಗದ ಉನ್ನತ ಮಟ್ಟವನ್ನು ಗಳಿಸಲು ಪ್ರಯತ್ನಿಸುತ್ತಾರೆ. ಅಲ್ಲಾಹನ ಮಾರ್ಗದಲ್ಲಿ ಖರ್ಚುಮಾಡುವವರ ಸಂಪತ್ತುಗಳಲ್ಲಿ ಮತ್ತು ಕುಟುಂಬಗಳಲ್ಲಿ ಅನುಗ್ರಹ ಸುರಿಸುವನು ಎಂದು ಪವಿತ್ರ ಖುರ್‌ಆನಿನ, ಹದೀಸಿನ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ನಿರ್ದೇಶನಗಳನ್ನು ಓದುವಾಗ ಅವರಿಗೆ ದೃಢವಿಶ್ವಾಸ ಬರುತ್ತದೆ. ಮನುಷ್ಯರು ತನಗೆ ಅತ್ಯಂತ ಪ್ರಿಯಕರವಾದುದನ್ನು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುತ್ತಿರುವಾಗ ನಾನು ಅದನ್ನು ವರ್ಧಿಸಿಕೊಡುವೆನು, ಏಳುನೂರು ಪಟ್ಟು ತನಕ ವರ್ಧಿಸಿ ನೀಡಬಲ್ಲೆನು, ಅದಕ್ಕಿಂತಲೂ ಹೆಚ್ಚು ನೀಡಬಲ್ಲೆನು ಎಂದು ಅಲ್ಲಾಹನು ಹೇಳುತ್ತಾನೆ. ತ್ಯಾಗ ಮಾಡುವಾಗ, ಹಝ್ರತ್ ಪೈಗಂಬರರ[ಸ] ನಿರ್ದೇಶನಗಳ ಪ್ರಕಾರ ಖರ್ಚು ಮಾಡುವಾಗ ಅಲ್ಲಾಹನು ಅವರ ಸಂಪತ್ತನ್ನು ವರ್ಧಿಸಿಕೊಡುವನು ಎಂದೂ ಅವರೊಂದಿಗೆ ಸಹ ಹಾಗೆ ವರ್ತಿಸುವನು ಎಂದೂ ಅಹ್ಮದಿಯರು ದೃಢವಾಗಿ ನಂಬುತ್ತಾರೆ. "ಒಬ್ಬನು ತನ್ನ ಪರಿಶುದ್ಧವಾದ ಸಂಪಾದನೆಯಿಂದ ಒಂದು ಖರ್ಜೂರವನ್ನಾದರೂ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿದರೆ ಅಲ್ಲಾಹನು ಅದನ್ನು ಸ್ವೀಕರಿಸುವನು. ಅಲ್ಲಾಹನು ಪರಿಶುದ್ಧವಾದ ವಸ್ತುಗಳನ್ನು ಮಾತ್ರ ಸ್ವೀಕರಿಸುತ್ತಾನೆ. (ಇದು ಬಹಳ ಮುಖ್ಯವಾದ ಸಂಗತಿಯಾಗಿದೆ. ಮೋಸಗಾರಿಕೆಯಿಂದ ಸಂಪಾದಿಸಿದ್ದನ್ನು ಅಲ್ಲಾಹನು ಸ್ವೀಕರಿಸಲಾರನು.) ಅಲ್ಲಾಹನು ಆ ಖರ್ಜೂರವನ್ನು ಬಲಗೈಯಿಂದ ತೆಗೆದುಕೊಂಡು ಆ ಖರ್ಜೂರದಷ್ಟಿರುವ ಸಂಪಾದನೆಯನ್ನು ವರ್ಧಿಸುತ್ತಾ ಹೋಗುವನು ಹಾಗೂ ಅದು ಪರ್ವತದಷ್ಟು ಆಗುವುದು. ನೀವು ಒಂದು ಚಿಕ್ಕ ಕರುವನ್ನು ಪೋಷಿಸಿ ಅದೊಂದು ದೊಡ್ಡದಾದ ಹಸುವಾಗುವ ಹಾಗೆ ಅದು ಸಂಭವಿಸುತ್ತದೆ" ಎಂದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದರು.

**(ಸಹೀಹ್ ಬುಖ಼ಾರಿ – ಕಿತಾಬುಝ್ಝುಕಾತ್ ಬಾಬುಸ್ಸದ್‌ಖತು ಮಿನ್ ಕಸಬಿತ್ತಯ್ಯಿಬ್ – ಹದೀಸ್ ನಂ. 1410)**

ನಾವು ಈ ಕಾಲಘಟ್ಟದಲ್ಲಿ ಈ ಎಲ್ಲ ವಿಷಯಗಳನ್ನು ಓದಿ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉಪದೇಶಗಳನ್ನು ಆಲಿಸಿ ತ್ಯಾಗ ಮಾಡುವಾಗ ನಮ್ಮ ಸಂಪತ್ತೂ ವಿಶ್ವಾಸವೂ ವರ್ಧಿಸುತ್ತದೆ. ಈ ಘಟನೆಗಳು ಹಿಂದಿನ ಕಾಲಕ್ಕೆ ಮಾತ್ರ ಸಂಬಂಧಿಸಿದ ಕಥೆಗಳಲ್ಲ. ಇಂತಹ ಘಟನೆಗಳು ಇಂದಿನ ಕಾಲದಲ್ಲಿ ಸಹ ಸಾಂಪತ್ತಿಕ ತ್ಯಾಗ ಮಾಡುವವರ ಸ್ವಂತ

ಅನುಭವಗಳಾಗಿವೆ. ಈಗ ನಾನು ಕೆಲವು ಘಟನೆಗಳನ್ನು ವಿವರಿಸುವೆನು.

ಆಫ್ರಿಕ ಖಂಡದ ಕೆಮರೂನ್ ದೇಶದ ಇನ್‌ಚಾರ್ಜ್ ಮುಬಲ್ಲಿಗ್ ಹೀಗೆ ಬರೆಯುತ್ತಾರೆ:

ಅಲ್ಲಿನ ಒಬ್ಬ ಮುಅಲ್ಲಿಮ್ ಅಬೂಬಕರ್ ಸಾಹಿಬ್ ಹೇಳಿದರು, ಅಬ್ದುಲ್ಲಾ ಎಂಬ ಒಬ್ಬ ಅಹ್ಮದಿ ಕಳೆದ ವರ್ಷ ನಿರುದ್ಯೋಗಿಯಾಗಿದ್ದರು. ಅವರಿಗೆ ತಮ್ಮ ಕುಟುಂಬದ ಖರ್ಚು ನಿಭಾಯಿಸಲು ಸಹ ಕಷ್ಟವಾಗುತ್ತಿತ್ತು. ಇಂತಹ ಸ್ಥಿತಿಯಲ್ಲಿ ಅವರು ಒಂದು ದಿವಸ ಜುಮುಅ ನಮಾಝ್‌ಗೆ ಆಗಮಿಸಿದಾಗ ಸೆಕ್ರೆಟರಿಯವರು ತಹ್‌ರೀಕ್ ಜದೀದ್ ಚಂದದ ಬಗ್ಗೆ ಪ್ರಕಟಣೆ ನೀಡಿದರು. ಅಬ್ದುಲ್ಲಾ ಸಾಹಿಬರ ಜೇಬಿನಲ್ಲಿ ಹತ್ತು ಸಾವಿರ ಫ್ರಾಂಕ್ ಸೇಫ಼ ಇತ್ತು. ಅವರು ಆ ಎಲ್ಲ ಹಣವನ್ನು ತಹ್‌ರೀಕ್ ಜದೀದ್ ಚಂದವಾಗಿ ಕೂಡಲೆ ಕೊಟ್ಟರು. ಕೆಲವು ದಿನಗಳ ನಂತರ ಅವರು ನಮ್ಮ ಕೇಂದ್ರಕ್ಕೆ ಬಂದಾಗ ಹೇಳಿದರು: "ಅಲ್ಲಾಹನು ನನ್ನ ಚಂದವನ್ನು ಸ್ವೀಕರಿಸಿದನು. ಒಂದು ವಾರದೊಳಗೆ ಒಂದು ಖಾಸಗಿ ಕಂಪೆನಿಯಲ್ಲಿ ಉದ್ಯೋಗ ಲಭಿಸಿದೆ. ನನ್ನ ಸಂಬಳ ಒಂದು ಲಕ್ಷ ಫ್ರಾಂಕ್ ಸೇಫ಼ ಆಗಿದೆ. ನಾನು ನೀಡಿದ ಚಂದದ ಹಣಕ್ಕಿಂತ ಹತ್ತು ಪಟ್ಟು ಹೆಚ್ಚಿಗೆ ನನಗೆ ಪ್ರತಿ ತಿಂಗಳು ಲಭಿಸುವುದು. ಇದು ಅಲ್ಲಾಹನ ವಿಶೇಷವಾದ ಅನುಗ್ರಹವಾಗಿದೆ. ಆದುದರಿಂದ ನನಗೆ ದೊರಕುವ ಮೊದಲ ತಿಂಗಳ ಸಂಬಳವನ್ನು ನಾನು ಚಂದವಾಗಿ ಕೊಡುವೆನು." ಈ ಜನರು ಬಡವರಾಗಿದ್ದಾರೆ. ಅಲ್ಲಾಹನು ಈ ಬಡಜನರು ಇಂತಹ ರೀತಿಯ ಅನುಭವವನ್ನು ಪಡೆಯುವಂತೆ ಮಾಡುತ್ತಿದ್ದಾನೆ ಮತ್ತು ಅವರಿಗೆ ಅನುಗ್ರಹ ನೀಡುತ್ತಿದ್ದಾನೆ.

ಇನ್ನೊಂದು ಉದಾಹರಣೆ ಹೀಗಿದೆ:

ಒಬ್ಬ ನವ ಅಹ್ಮದಿ ದಾಊದ್ ಸಾಹಿಬ್ ಆಫ್ರಿಕದ ಕಾಂಗೋ ಬ್ರಾಝ್‌ವೇಲ್‌ನ ನಿವಾಸಿಯಾಗಿದ್ದಾರೆ. ಅವರ ಕಷ್ಟದ ಪರಿಸ್ಥಿತಿಯ ಕಾರಣ ಕನಿಷ್ಠ ಎಲ್ಲ ಜುಮುಅ ನಮಾಝಿಗೆ ಮಸೀದಿಗೆ ಆಗಮಿಸಲಿ ಎಂದು ಅವರೊಂದಿಗೆ ಹೇಳಲಾಗಿತ್ತು. ಅವರು ಎಲ್ಲ ಜುಮುಅ ನಮಾಝಿಗೋಸ್ಕರ ಆಗಮಿಸಲು ತೊಡಗಿದಾಗ ಒಮ್ಮೆ ಸಾಂಪತ್ತಿಕ ತ್ಯಾಗದ ಬಗ್ಗೆ ಪ್ರಸ್ತಾಪಿಸಲಾಯಿತು. 'ಅಲ್ಲಾಹನು ನಿಮಗೆ ನೀಡಿದವುಗಳಿಂದ ನೀವು ಏನಾದರೂ ಅಲ್ಲಾಹನ ಮಾರ್ಗದಲ್ಲಿ ಆವಶ್ಯಕವಾಗಿಯೂ ನೀಡಿರಿ. ಆಗ ಅಲ್ಲಾಹನು ನಿಮಗೆ ಅದಕ್ಕಿಂತ ಹೆಚ್ಚು ಮರಳಿ ಕೊಡುವನು. ಪರಿಶುದ್ಧವಾದ ಸಂಪಾದನೆಯಿಂದ ಅಲ್ಲಾಹನ ಮಾರ್ಗದಲ್ಲಿ ಖರ್ಚುಮಾಡಿದರೆ ಅಲ್ಲಾಹನು ನಿಮಗೆ ಮರಳಿಸುವನು. ಹೀಗೆ ನಿಮ್ಮ ಕಷ್ಟದ ಪರಿಸ್ಥಿತಿ ದೂರವಾಗುವುದು' ಎಂದು ಹೇಳಲಾಯಿತು. ಮುಬಲ್ಲಿಗ್ ಹೇಳುತ್ತಾರೆ: ಮನೆಗೆ ಮರಳಿ ಹೋಗಲು ಟಿಕೆಟಿನ ಹಣ ನೀಡಿ ನಾನು ಅವರನ್ನು ಕಳುಹಿಸಿದೆನು. ಒಂದು ವಾರದ ನಂತರ ಜುಮುಅ ಪ್ರಾರ್ಥನೆಗೆ ಬಂದಾಗ ಅವರು ಸಂತೋಷಭರಿತರಾಗಿದ್ದರು. ಅವರೊಂದಿಗೆ ವಿಚಾರಿಸಿದಾಗ ಅವರು ಹೇಳಿದರು: "ಕಳೆದ ವಾರ ನಾನು

ಚಂದವಾಗಿ ನೂರು ಫ್ರಾಂಕ್ ಸೇಫ ಕೊಟ್ಟಿದ್ದೆನು. ಚಂದ ಕೊಟ್ಟ ನಂತರ ನಾನು ಮನೆಗೆ ಮರಳಿದಾಗ ನಮ್ಮ ನೆರೆಹೊರೆಯ ಒಬ್ಬ ಸ್ನೇಹಿತನು ನಮ್ಮ ಮನೆಗೆ ಆಗಮಿಸಿದನು. ಕೆಲವು ತಿಂಗಳಿಂದ ನಮ್ಮ ಮನೆ ಅಂಗಳದಲ್ಲಿ ಸ್ವಲ್ಪ ಸೌದೆ ಇರಿಸಲಾಗಿತ್ತು. ನಮ್ಮ ನೆರೆಹೊರೆಯ ಸ್ನೇಹಿತ ಆ ಸೌದೆ ತನಗೆ ಬೇಕೆಂದು ಹೇಳಿ ಅದರ ಬೆಲೆಯಾಗಿ ನಾಲ್ಕು ಸಾವಿರ ಫ್ರಾಂಕ್ ಸೇಫ ನನ್ನ ಕೈಯಲ್ಲಿರಿಸಿದರು. ನನಗೆ ಬಹಳ ಸಂತೋಷವಾಯಿತು. ನಾನು ಚಂದ ಪಾವತಿ ಮಾಡಿ ಮನೆಗೆ ಬಂದ ಕೂಡಲೆ ಅಲ್ಲಾಹನು ನನಗೆ ಅದಕ್ಕಿಂತ ನಲ್ವತ್ತು ಪಟ್ಟು ಹಣವನ್ನು ನೀಡಿದನು."

ಇದೇ ರೀತಿ ತನ್‌ಝಾನಿಯಾ ದೇಶದ ಅಮೀರ್ ಸಾಹಿಬ್ ಬರೆಯುತ್ತಾರೆ:

ಒಬ್ಬ ನವ ಅಹ್ಮದಿ ಉಬೈದ್ ಸಾಹಿಬ್ ಹೇಳುತ್ತಾರೆ: "ಕಟ್ಟಡ ನಿರ್ಮಾಣ ಮಾಡುವುದು ನನ್ನ ಕೆಲಸವಾಗಿದೆ. ಐದು ತಿಂಗಳಿಂದ ಕೆಲಸವಿಲ್ಲದ ಕಾರಣ ಬಹಳ ಕಷ್ಟದಲ್ಲಿದ್ದೆ. ನನ್ನ ಪತ್ನಿ ಮತ್ತು ಮಕ್ಕಳ ಪೋಷಣೆಯೇ ಬಹಳ ಕಷ್ಟದಿಂದ ಆಗುತ್ತಿತ್ತು. ಒಂದು ದಿನ ಮುಅಲ್ಲಿಮ್ ಸಾಹಿಬರು ಚಂದದ ಬಗ್ಗೆ ಪ್ರಸ್ತಾಪಿಸಿದರು. ಆಗ ನಾನು ಇನ್ನೂ ಹೆಚ್ಚು ಚಿಂತಿತನಾದೆ. ಏಕೆಂದರೆ ನನ್ನ ಜೇಬಿನಲ್ಲಿದ್ದ ಹಣ ನನ್ನ ಅಂದಿನ ಮನೆ ಖರ್ಚಿಗೆ ಮಾತ್ರ ಸಾಕಾಗುವಷ್ಟಿತ್ತು. ಅಲ್ಲಾಹನ ಮಾರ್ಗದಲ್ಲಿ ತ್ಯಾಗ ಮಾಡಿದರೆ ಅಲ್ಲಾಹನು ಅನುಗ್ರಹ ನೀಡುತ್ತಾನೆಂದು ಮುಅಲ್ಲಿಮ್ ಸಾಹಿಬ್ ಹೇಳಿದಾಗ ನಾನು ನನ್ನ ಕೈಯಲ್ಲಿದ್ದ ಹಣವನ್ನು ಚಂದವಾಗಿ ನೀಡಿದೆನು. ಇಂದು ನನ್ನ ಮಕ್ಕಳಿಗೆ ತಿನ್ನಲು ಏನು ಕೊಡಲಿ ಎಂದು ನಾನು ಯೋಚಿಸುತ್ತಿದ್ದೆ. ನಾನು ಇದೇ ಯೋಚನೆಯಲ್ಲಿ ಮಗ್ನನಾಗಿದ್ದಾಗ ನನಗೆ ಒಂದು ಸಂದೇಶ ಲಭಿಸಿತು. ಒಂದು ಸ್ಥಳದಲ್ಲಿ ಕಟ್ಟಡ ನಿರ್ಮಾಣ ನಡೆಯುತ್ತಿದೆ. ನಾನು ಅಲ್ಲಿಗೆ ಹೋಗಿ ಕೂಡಲೆ ಅಳತೆ ಮೊದಲಾದವುಗಳನ್ನು ಮಾಡಬೇಕೆಂದಾಗಿತ್ತು ಆ ಸಂದೇಶ. ನಾನು ಅಲ್ಲಿಗೆ ಹೋದಾಗ ನನಗೆ ಮುಂಗಡವಾಗಿ ಸ್ವಲ್ಪ ಹಣ ಲಭಿಸಿತು. ನಾನು ಬಹಳ ಆಶ್ಚರ್ಯಗೊಂಡೆನು. ನಾನು ಐದು ತಿಂಗಳಿಂದ ಕಷ್ಟಪಡುತ್ತಿದ್ದೆ. ನಾನು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿದಾಗ ಕೂಡಲೇ ಅನುಗ್ರಹಗಳ ಬಾಗಿಲು ತೆರೆಯಿತು. ನಾನು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಲು ಪ್ರಾರಂಭಿಸಿದಾಗ ನನ್ನ ಸ್ಥಿತಿ ಬದಲಾವಣೆ ಹೊಂದಿತು. ಇನ್ನು ಎಂದೂ ನಾನು ಚಂದ ಕೊಡುವುದನ್ನು ನಿಲ್ಲಿಸಲಾರೆ." ನೋಡಿರಿ, ಅಲ್ಲಾಹನು ಹೊಸ ಅಹ್ಮದಿಯರು ಸಹ ಈ ರೀತಿಯ ಅನುಭವಗಳನ್ನು ದಾಟಿ ಹೋಗುವಂತೆ ಮಾಡುತ್ತಿದ್ದಾನೆ.

ಆಫ್ರಿಕದ ಮಾಲಿ ದೇಶದ ಲಾಸೀನಾ ಸಾಹಿಬ್ ಎಂಬವರು ಮೂರು ನಾಲ್ಕು ವರ್ಷಗಳ ಹಿಂದೆ ಬೈಅತ್ ಮಾಡುವ ಭಾಗ್ಯ ಗಳಿಸಿದರು. ಅವರು ತನ್ನ ಸಾಮಾನ್ಯ ಸಂಪಾದನೆಯ ಹಣದಿಂದ ಐನೂರು ಫ್ರಾಂಕ್ ಸೇಫ ಚಂದ ಕೊಡುತ್ತಿದ್ದರು. ಅವರು ಹೇಳುತ್ತಾರೆ: "ಅಹ್ಮದಿಯಾ ಜಮಾಅತಿಗೆ ಸೇರಿ ಚಂದ ಕೊಡಲು ಪ್ರಾರಂಭಿಸುವುದಕ್ಕಿಂತ ಮೊದಲು ನನ್ನ ವ್ಯವಹಾರ ಸರಿಯಾಗಿರಲಿಲ್ಲ. ಆದರೆ ಚಂದ ಕೊಡಲು ಪ್ರಾರಂಭಿಸಿದ ನಂತರ ಅಲ್ಲಾಹನು ನನ್ನ ವ್ಯಾಪಾರದಲ್ಲಿ

ಅಸಾಧಾರಣ ಅನುಗ್ರಹ ನೀಡಿದನು." ಈಗ ಅವರು ಅಲ್ಲಾಹನ ಅನುಗ್ರಹದಿಂದ ವಸಿಯ್ಯತ್ ಮಾಡಿರುವರು. ಈಗ ಅವರು ಐನೂರಕ್ಕೆ ಬದಲಾಗಿ ಮೂವತ್ತೈದು ಸಾವಿರ ಫ್ರಾಂಕ್ ಸೇಫ ಮಾಸಿಕ ಚಂದ ನೀಡುತ್ತಿದ್ದಾರೆ. ಪ್ರಾಯಶಃ ಜಮಾಅತ್ ಅವರಿಗೆ ಸಾಂಪತ್ತಿಕ ಸಹಾಯ ನೀಡುತ್ತಿದೆ ಎಂದು ಅವರ ಅಹ್ಮದಿಯೇತರ ಸ್ನೇಹಿತರು ಅವರ ವ್ಯಾಪಾರದ ಅಭಿವೃದ್ಧಿಯನ್ನು ಕಂಡು ಯೋಚಿಸುತ್ತಿದ್ದಾರೆ.

ಫ್ರಾನ್ಸಿನ ಓರ್ವ ನವ ಅಹ್ಮದಿ ಹಂಝು ಸಾಹಿಬ್ ಹೇಳುತ್ತಾರೆ:

"ಬೈಅತ್ ಮಾಡಿದ ನಂತರ ನನಗೆ ಜಮಾಅತಿನ ಚಂದ ವ್ಯವಸ್ಥೆಯ ಬಗ್ಗೆ ತಿಳಿಯಿತು. ಆಗ ನನ್ನ ಸಾಂಪತ್ತಿಕ ಸ್ಥಿತಿ ಬಹಳ ಬಲಹೀನವಾಗಿತ್ತು. ಚಂದ ನೀಡುವುದರಲ್ಲಿ ಬಹಳ ಅನುಗ್ರಹಗಳಿವೆ, ಅಲ್ಲಾಹನು ಅದಕ್ಕೆ ಬದಲಾಗಿ ಅನೇಕ ಪಟ್ಟು ವರ್ಧಿಸಿ ನೀಡುತ್ತಾನೆ ಎಂದು ನನ್ನೊಂದಿಗೆ ಕೆಲವು ಅಹ್ಮದಿ ಸ್ನೇಹಿತರು ಹೇಳಿದರು. ನನ್ನ ಹತ್ತಿರ ಅರುವತ್ತು ಯುರೋ ಇತ್ತು. ನಾನು ಅದನ್ನು ಅಲ್ಲಾಹನ ಮಾರ್ಗದಲ್ಲಿ ಚಂದವಾಗಿ ಕೊಟ್ಟು ಅಲ್ಲಾಹನ ಮೇಲೆ ಭರವಸೆ ಇಟ್ಟೆ. ನಾನು ಚಂದ ಕೊಟ್ಟ ನಂತರ ಕೆಲವು ದಿನಗಳೊಳಗೆ ನನ್ನ ಬ್ಯಾಂಕ್ ಸ್ಟೇಟ್‌ಮೆಂಟ್ ನನ್ನ ಮನೆಗೆ ಬಂತು. ಆಗ ನನ್ನ ಎಕೌಂಟಿಗೆ ಆರುನೂರು ಯುರೋ ಜಮೆ ಆಗಿದ್ದಾಗಿ ನಾನು ಕಂಡೆ. ಸರಕಾರ ನನಗೆ ಆರುನೂರು ಯುರೋ ಕೊಡಲಿಕ್ಕಿತ್ತು ಎಂದು ನಾನು ಅದರ ಬಗ್ಗೆ ವಿಚಾರಿಸಿದಾಗ ತಿಳಿಯಿತು, ಅದು ಮೊದಲು ಅವರ ದಾಖಲೆಯಲ್ಲಿರಲಿಲ್ಲ. ಈ ರೀತಿ ನಾನು ಚಂದವಾಗಿ ನೀಡಿದ ಹಣವನ್ನು ಅಲ್ಲಾಹನು ಅನೇಕ ಪಟ್ಟು ವರ್ಧಿಸಿ ಮರಳಿ ನೀಡಿದನು. ಅದರ ಬಗ್ಗೆ ನಾನು ಊಹಿಸಿಯೂ ಇರಲಿಲ್ಲ."

ತನ್‌ಝಾನಿಯದ ಅಮೀರ್ ಸಾಹಿಬ್ ಬರೆಯುತ್ತಾರೆ:

ಅಹ್ಮದ್ ಸಾನಿ ಸಾಹಿಬರು ದೊಡೋಮ ರೀಜನ್‌ರವರಾಗಿರುವರು. ಅವರು ವಸಿಯ್ಯತ್ ಸಹ ಮಾಡಿರುವರು. ಅವರು ಐವತ್ತು ಸಾವಿರ ಶಿಲ್ಲಿಂಗ್ ವಾಗ್ದಾನ ಮಾಡಿದ್ದರು. ಅದನ್ನು ಅವರು ಬಹಳ ಹಿಂದೆ ಪಾವತಿ ಮಾಡಿದ್ದರು. ಅನಂತರ ಕಳೆದ ತಿಂಗಳು ನನ್ನನ್ನು (ಎಂದರೆ ಖಲೀಫತುಲ್ ಮಸೀಹ್) ಅವರು ಕನಸಿನಲ್ಲಿ ಕಂಡರು. ಕನಸಿನಲ್ಲಿ ನಾನು ಅವರ ಮನೆಗೆ ಹೋಗಿ ಹೀಗೆ ಕೇಳಿದೆ: "ಭೂಮಿಯಿಂದ ಚಿನ್ನ ತೆಗೆಯುವ ಕೆಲಸ ನೀವು ಮಾಡುತ್ತಿದ್ದೀರಾ?". ಅವರು ಹೇಳಿದರು: "ಹೌದು ಹುಝೂರ್, ಆದರೆ ಈ ಕೆಲಸ ಸರಿಯಾಗಿ ನಡೆಯುತ್ತಿಲ್ಲ." ಅನಂತರ ನಾನು (ಖಲೀಫತುಲ್ ಮಸೀಹ್) ಅವರ ಕಡೆಗೆ ನೋಡಿದರು ಮತ್ತು ಎಲ್ಲಿಂದಲೋ ಹೀಗೆ ಶಬ್ದ ಬಂತು: "ತಹ್‌ರೀಕ್ ಜದೀದಿನ ಚಂದಾವನ್ನು ವರ್ಧಿಸಿರಿ". ಸಾನಿ ಸಾಹಿಬರು ದೇಸಿ ಮದ್ದುಗಳನ್ನು ರೋಗಿಗಳಿಗೆ ಕೊಡುವ ಕೆಲಸವನ್ನು ಸಹ ಮಾಡುತ್ತಿದ್ದರು. ಅದರಲ್ಲಿ ಅವರು ಪರಿಣತರಾಗಿದ್ದರು. ಅವರು ಹೇಳುತ್ತಾರೆ: "ಈ ಕನಸು ಕಂಡ ನಂತರ ಅಲ್ಲಾಹನು ಅವರ ಕೈಯಲ್ಲಿ ಅಸಾಧಾರಣವಾದ ಅನುಗ್ರಹ ಸುರಿಸಿರುವನು. ಕಳೆದ ಒಂದು ತಿಂಗಳಿಂದ ದೂರ

ದೂರದಿಂದ ರೋಗಿಗಳು ಬರುತ್ತಿದ್ದಾರೆ. ಅವರ ಆದಾಯದಲ್ಲಿ ಅಸಾಧಾರಣವಾದ ವರ್ಧನೆ ಉಂಟಾಗುತ್ತಿದೆ. ಈ ಸ್ವಪ್ನದ ನಂತರ ಕಳೆದ ಒಂದು ತಿಂಗಳಲ್ಲಿ ಅವರು ನಾಲ್ಕು ಲಕ್ಷ ಇಪ್ಪತ್ತೇಳು ಸಾವಿರ ಶಿಲ್ಲಿಂಗ್‌ಗಿಂತ ಹೆಚ್ಚು ತಹ್‌ರೀಕ್ ಜದೀದ್ ಚಂದಾ ಪಾವತಿಸಿದರು. ಈ ಅವರು ತಮ್ಮ ರೀಜನಿನಲ್ಲಿ ಅತ್ಯಂತ ಹೆಚ್ಚು ಚಂದಾ ನೀಡುವವರಾಗಿರುವರು.

ಭಾರತದ ಬೆಂಗಳೂರಿನ ಒಬ್ಬ ತರುಣ ನಿರುದ್ಯೋಗಿಯಾಗಿದ್ದರು. ಅವರಿಗೆ ತನ್ನ ಮನೆಯ ಕಂತಿನ ಹಣ ಸಹ ಪಾವತಿಸಲು ಕಷ್ಟವಾಗುತ್ತಿತ್ತು. ತಹ್‌ರೀಕ್ ಜದೀದ್ ಇನ್ಸ್‌ಪೆಕ್ಟರ್ ಹೇಳುತ್ತಾರೆ, "ನಾನು ಆ ತರುಣರ ಮನೆಗೆ ಹೋದೆನು. ಆದರೆ ಸೆಕ್ರೆಟರಿ ಸಾಹಿಬರು ನನಗೆ ಅವರ ಸ್ಥಿತಿಯ ಬಗ್ಗೆ ಹೇಳಿದುದರಿಂದ ನಾನು ಮೌನವಾಗಿದ್ದು ಏನೂ ಹೇಳಲಿಲ್ಲ." ಆಗ ಅವರು ಹೇಳಿದರು: "ನೀವು ನನ್ನೊಂದಿಗೆ ಏನೋ ಹೇಳಲು ಬಯಸಿದ್ದೀರಲ್ಲ ಅದನ್ನು ಹೇಳಿರಿ." ನಾನು ಹೇಳಿದೆ, "ನನಗೆ ತಮ್ಮ ಸ್ಥಿತಿಯ ಬಗ್ಗೆ ಪೂರ್ಣವಾಗಿ ತಿಳಿದಿರಲಿಲ್ಲ. ನಾನು ತಮ್ಮಿಂದ ಒಂದು ಲಕ್ಷ ರೂಪಾಯಿಗಳ ತಹ್‌ರೀಕ್ ಜದೀದ್ ಚಂದದ ವಾಗ್ದಾನ ಪಡೆಯಲು ಇಚ್ಛಿಸಿದ್ದೆ. ಆದರೆ ನಿಮ್ಮ ಸ್ಥಿತಿಯ ಬಗ್ಗೆ ತಿಳಿದು ಮೌನವನ್ನವಲಂಬಿಸಿದೆ. ನೀವು ನಿಮ್ಮ ಶಕ್ತ್ಯಾನುಸಾರವಾಗಿ ನೀವು ಇಷ್ಟಪಡುವುದನ್ನು ವಾಗ್ದಾನವಾಗಿ ಬರೆಯಿಸಿರಿ." ಆಗ ಅವರು ಹೇಳಿದರು, "ನೀವು ಒಂದು ಲಕ್ಷದ ವಾಗ್ದಾನ ನನ್ನ ಪರವಾಗಿ ಬರೆಯಿರಿ. ನಾನು ಅಲ್ಲಾಹನ ಮೇಲೆ ಭರವಸೆ ಇಡುತ್ತೇನೆ. ಇನ್‌ಶಾಅಲ್ಲಾಹ್ ನಾನು ಪಾವತಿಸುವೆನು." ಅಲ್ಲಾಹನು ಅವರಿಗೆ ಅನುಗ್ರಹ ನೀಡಿದನು. ಅವರಿಗೆ ಪುನಃ ನೌಕರಿ ಲಭಿಸಿತು. ಬಹಳ ಉನ್ನತ ಉದ್ಯೋಗ ಲಭಿಸಿತು. ಅವರು ಎರಡು ವರ್ಷಗಳ ವಾಗ್ದಾನ ಹಣವನ್ನು ಪಾವತಿಸಿದರು. ಕಳೆದ ವರ್ಷದ ಮತ್ತು ಈ ವರ್ಷದ ವಾಗ್ದಾನಗಳನ್ನು ಈಡೇರಿಸಿದರು.

ಮಯೋಟಿಯಲ್ಲಿ ಒಂದು ದ್ವೀಪವಿದೆ. ಅಲ್ಲಿಯ ಮುಬಲ್ಲಿಗ್ ಸಾಹಿಬರು ಬರೆಯುತ್ತಾರೆ, ಇದು ಬಹಳ ದರಿದ್ರ ದೇಶವಾಗಿದೆ. ಇಲ್ಲಿಯ ಜನರು ತಮ್ಮ ಮನೆಯ ತರಕಾರಿಗಳನ್ನೆಲ್ಲ ಮಾರಿ ಬಹಳ ಕಷ್ಟದಿಂದ ಜೀವಿಸುತ್ತಾರೆ. ರಾಬಿಯೋನ್ ಎಂಬ ಹೆಸರಿನ ಒಬ್ಬ ಅಹ್ಮದಿ ಸಹೋದರ ಮೋಟಾರ್ ಸೈಕಲಿನ ಅಂಗಡಿಯಲ್ಲಿ ಕೆಲಸಮಾಡುತ್ತಾರೆ. ಎಲ್ಲರಿಗಿಂತ ಅಧಿಕ ಚಂದಾ ನೀಡುತ್ತಾರೆ. ಅವರು ಹೇಳುತ್ತಾರೆ: "ನಾನು ಎಷ್ಟು ಚಂದಾ ನೀಡುತ್ತೇನೋ ತಿಂಗಳಿನ ಕೊನೆಯಲ್ಲಿ ಅದರ ಇಮ್ಮಡಿ ಹಣ ನನಗೆ ಮರಳಿ ಸಿಗುತ್ತದೆ." ಒಂದು ದಿನ ಅವರ ಪತ್ನಿ ಕೇಳಿದಳು: "ನೀವು ಇಷ್ಟು ಅಧಿಕ ಚಂದಾ ಏಕೆ ಕೊಡುತ್ತೀರಿ? ಅವರು ಹೇಳಿದರು: ಅಲ್ಲಾಹನು ನನಗೆ ಇದನ್ನು ಇಮ್ಮಡಿ ಮಾಡಿ ಕೊಡುತ್ತಾನೆ." ಅನಂತರ ಪತ್ನಿಯ ಮುಂದೆಯೇ ಸ್ವಲ್ಪ ಹಣ ಚಂದಾ ಆಗಿ ಪಾವತಿಸಿದರು. "ನೋಡು ಅಲ್ಲಾಹನು ಈ ಹಣವನ್ನು ಖಂಡಿತ ಮರಳಿ ಕೊಡುವನು" ಎಂದು ಅವರು ಹೇಳಿದರು. ಅನಂತರ ಹಾಗೆಯೇ ಆಯಿತು. ತಿಂಗಳ ಕೊನೆಯಲ್ಲಿ ಅಂಗಡಿಯ ಮಾಲಿಕನು ತನ್ನ ಎಲ್ಲ ನೌಕರರಿಗೆ ಬೋನಸ್ ನೀಡಿದರು. ಇವರಿಗೆ

ಸಿಕ್ಕಿದ ಬೋನಸ್ ಹಣ ಅವರು ಪಾವತಿಸಿದ ಚಂದಾ ಹಣಕ್ಕಿಂತ ಹೆಚ್ಚಾಗಿತ್ತು. ಇವರು ಅಲ್ಲಾಹನ ಅನುಗ್ರಹದಿಂದ ಸಾಂಪತ್ತಿಕ ತ್ಯಾಗದಲ್ಲಿ ಮುನ್ನಡೆಯುತ್ತಿದ್ದಾರೆ.

ಕೆನಡಾದ ಅಮೀರ್ ಸಾಹಿಬ್ ಬರೆಯುತ್ತಾರೆ, ಲಜ್‌ನಾದ ತಹ್‌ರೀಕ್ ಜದೀದ್ ಸೆಕ್ರಟರಿ ಪರ್ಯಟನೆ ವೇಳೆ ಸಹೋದರಿಯರೊಡನೆ ಹೇಳಿದರು: "ತಮ್ಮ ಸಂಬಳದ ಅರ್ಧ ಅಥವಾ ಪೂರ್ತಿ ತಹ್‌ರೀಕ್ ಜದೀದಿನಲ್ಲಿ ಕೊಡಬೇಕೆಂದು ಹಝ್‌ರತ್ ಮುಸ್ಲಿಹ್ ಮೌಊದ್(ರ) ಈ ಯೋಜನೆ ಶುರುಮಾಡಿದಾಗ ಹೇಳಿದ್ದರು." ಇದನ್ನು ಕೇಳಿದ ಅಲ್ಲಿಯ ಪಾರ್ಟ್ ಟೈಮ್ ಕೆಲಸಮಾಡುತ್ತಿದ್ದ ಸಹೋದರಿ ಹೀಗೆ ಇಚ್ಛಿಸಿದಳು: "ನನಗೆ ಫುಲ್ ಟೈಮ್ ಜಾಬ್ ಸಿಕ್ಕಿದರೆ ನಾನು ಪೂರ್ತಿ ಸಂಬಳವನ್ನು ತಹ್‌ರೀಕ್ ಜದೀದ್ ಚಂದಾ ಆಗಿ ಪಾವತಿಸುವೆ." ಅನಂತರ ಅವರಿಗೆ ಐದು ಸಾವಿರ ಡಾಲರಿನ ಫುಲ್ ಟೈಮ್ ಕೆಲಸ ಸಿಕ್ಕಿತು. ಆ ಸಂಬಳವನ್ನು ತಹ್‌ರೀಕ್ ಜದೀದ್ ಚಂದಾ ಆಗಿ ಪಾವತಿಸಿದ್ದಳು. ಈ ರೀತಿ ಹಲವು ಉದಾಹರಣೆಗಳು ಇವೆ.

ಅಲ್ಲಾಹನು ಹೇಗೆ ವರ್ತಿಸುತ್ತಾನೆ ಮತ್ತು ತನ್ನ ವಾಗ್ದಾನಗಳನ್ನು ಹೇಗೆ ಈಡೇರಿಸುತ್ತಾನೆ ಎಂದು ಅಲ್ಲಾಹನ ಅನುಗ್ರಹದಿಂದ ಅಹ್ಮದಿಯಾ ಜಮಾಅತಿನ ಆರಂಭದಿಂದ ಇಂದಿನ ವರೆಗಿನ ನಿಷ್ಠಾವಂತರಾದ ಹಳೆಯ ಅಹ್ಮದಿಯರು ಮತ್ತು ಹೊಸಬರು ನೋಡಿರುವರು. ಅವರ ತ್ಯಾಗಗಳ ಹಲವು ಸಂಭವಗಳನ್ನು ನಾನು ಓದಿ ಹೇಳಿರುವೆನು. ಈ ಕಾಲದಲ್ಲಿ ವಿಶೇಷವಾಗಿ ಸಾಂಪತ್ತಿಕ ತ್ಯಾಗಗಳ ವಿಷಯ ಅಹ್ಮದಿಯಾ ಜಮಾಅತಿನ ಪ್ರತ್ಯೇಕತೆ ಆಗಿದೆ. ಈ ಕಾಲಘಟ್ಟ ಇಸ್ಲಾಮಿನ ಪ್ರಚಾರವನ್ನು ಪರಿಪೂರ್ಣಗೊಳಿಸುವ ಕಾಲಘಟ್ಟವಾಗಿದೆ ಎಂದು ಅಹ್ಮದಿಯರಲ್ಲಿ ಬಹುತೇಕ ಜನರು ತಿಳಿದಿರುವರು. ಅದಕ್ಕೋಸ್ಕರ ಅಲ್ಲಾಹನು ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಕಳುಹಿಸಿದ್ದಾನೆ. ಇಸ್ಲಾಮ್ ಧರ್ಮ ಪ್ರಚಾರ ಈಗ ಪವಿತ್ರ ಖುರ್‌ಆನಿನ ಭಾಷಾಂತರ ಪ್ರಕಟಣೆ ಮೂಲಕ ನಡೆಯುತ್ತಿದೆ. ವಿವಿಧ ಭಾಷೆಗಳಲ್ಲಿ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗ್ರಂಥಗಳ ಪ್ರಕಟಣೆ ಮತ್ತು ಜಮಾಅತಿನ ಇತರ ಸಾಹಿತ್ಯಗಳ ಪ್ರಕಟಣೆ ಮೂಲಕ ನಡೆಯುತ್ತಿದೆ. ಮಸೀದಿಗಳ ನಿರ್ಮಾಣ ಮೂಲಕ ಮತ್ತು ತಬ್ಲೀಗ್ ಕೇಂದ್ರಗಳ ಸ್ಥಾಪನೆಯ ಮೂಲಕ ನಡೆಯುತ್ತಿದೆ. ಜಾಮಿಅಗಳ ಸ್ಥಾಪನೆಗಳ ಮೂಲಕ ನಡೆಯುತ್ತಿದೆ. ಈಗ ಏಶ್ಯದಲ್ಲಿ, ಆಫ್ರಿಕದಲ್ಲಿ, ಯೂರೋಪಿನಲ್ಲಿ, ನಾರ್ಥ್ ಅಮೇರಿಕದಲ್ಲಿ, ಇಂಡೋನೇಶ್ಯದಲ್ಲಿ ಜಾಮಿಅ ಸ್ಥಾಪಿತವಾಗಿದೆ. ಅಲ್ಲಿಂದ ಮುಬಲ್ಲಿಗರು ಮತ್ತು ಮುಅಲ್ಲಿಮರು ತಯಾರಾಗಿ ಇಸ್ಲಾಮಿನ ಪ್ರಚಾರ ಮಾಡುತ್ತಿದ್ದಾರೆ. ಈ ಎಲ್ಲ ಕಾರ್ಯಗಳು ನಡೆಯುತ್ತಿರುವುದು ಅಹ್ಮದಿಯರಿಗೆ ತಿಳಿಯುತ್ತಿರುವಾಗ ಅವುಗಳಿಗೋಸ್ಕರ ಸಾಂಪತ್ತಿಕ ತ್ಯಾಗಗಳ ಆವಶ್ಯಕತೆ ಇದೆ ಎಂದು ತಿಳಿದುಕೊಂಡು ಸಾಂಪತ್ತಿಕ ತ್ಯಾಗಗಳನ್ನು ಅವರು ಮಾಡುತ್ತಾ ಇರುತ್ತಾರೆ. ಸಹಜೀವಿಗಳೊಂದಿಗೆ ಸಹಾನುಭೂತಿ ತೋರಿಸುವುದು ಸತ್ಯವಿಶ್ವಾಸದ ಭಾಗವಾಗಿದೆ ಎಂದು ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್

ಹೇಳಿರುವರು. ಈ ಸಹಾನುಭೂತಿಯ ಕಾರಣದಿಂದ ಅಹ್ಮದಿಯಾ ಜಮಾಅತಿನಲ್ಲಿ ಆಸ್ಪತ್ರೆಗಳ, ಶಾಲೆಗಳ ಮತ್ತು ಇತರ ಸಹಕಾರಿ ಸಂಸ್ಥೆಗಳ ವ್ಯವಸ್ಥೆ ಇದೆ. ಈ ಎಲ್ಲ ಕಾರ್ಯಗಳು ನಿಷ್ಠಾವಂತರ ತ್ಯಾಗಗಳ ಮೂಲಕ ನಡೆಯುತ್ತಿವೆ. ಅಲ್ಲಾಹನು ಅವರ ತ್ಯಾಗಗಳಿಗೋಸ್ಕರ ಅವರಿಗೆ ಇಹಲೋಕದಲ್ಲಿಯೂ ಪರಲೋಕದಲ್ಲಿಯೂ ಅನುಗ್ರಹ ನೀಡುವನೆಂದು ಅವರಿಗೆ ಅಲ್ಲಾಹನ ಮೇಲೆ ದೃಢವಿಶ್ವಾಸವಿದೆ ಇನ್‌ಶಾ ಅಲ್ಲಾಹ್. ಆಡಳಿತೆ ವ್ಯವಸ್ಥೆ ಜನರಿಗೆ ಇದರ ಬಗ್ಗೆ ಹೇಳಿಕೊಡುವುದಿಲ್ಲ ಎಂಬುದು ಮಾತ್ರವಾಗಿದೆ ಕೆಲವು ಸಲ ಕಾಣಲ್ಪಡುವ ಕೊರತೆ. ಇದಕ್ಕಾಗಿ ಜನರ ಗಮನಹರಿಸಿದರೆ ಖಂಡಿತವಾಗಿಯೂ ಜನರು ಇದರ ಬಗ್ಗೆ ಶ್ರದ್ಧೆವಹಿಸುವರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಈ ಕುರಿತು ಜನರ ಶ್ರದ್ಧೆ ಹರಿಸುವ ಬಗ್ಗೆ ಹೀಗೆ ಹೇಳಿದರು:

"ನಮ್ಮ ಜಮಾಅತಿಗೆ ಚಂದದ ಆವಶ್ಯಕತೆ ಇದೆ ಎಂದು ಬಹುತೇಕ ಜನರಿಗೆ ಈಗ ಸಹ ತಿಳಿಸಿಲ್ಲ ಎಂದು ಯೋಚಿಸಬೇಕಾಗಿದೆ. ಬಹಳ ಜನರು ಅಳುತ್ತಾ ಬೈಅತ್ ಮಾಡಿ ಹೋಗುತ್ತಾರೆ. ಅವರೊಂದಿಗೆ ಚಂದ ಕೊಡಬೇಕೆಂದು ಹೇಳುತ್ತಿದ್ದರೆ ಅವರು ಖಂಡಿತವಾಗಿಯೂ ಚಂದ ಕೊಡುತ್ತಿದ್ದರು. ಅದರ ಬಗ್ಗೆ ಅವರ ಗಮನ ಸೆಳೆಯುವುದು ಮತ್ತು ಆವಶ್ಯಕವಾಗಿದೆ. ಪ್ರತಿಯೊಬ್ಬ ಬಲಹೀನ ವ್ಯಕ್ತಿಯನ್ನು ಸಹ ಚಂದ ಕೊಡುವವರಲ್ಲಿ ಸೇರಿಸಿರಿ." (ನೀವು ಪರಸ್ಪರ ಅದರ ಬಗ್ಗೆ ಪ್ರಚೋದಿಸಿರಿ.)

**(ಮಲ್‌ಫೂಝಾತ್, ಭಾಗ 6, ಪುಟ 41)**

ಈ ಸಂಗತಿ ಈಗ ಸಹ ಇದೇ ರೀತಿ ಇದೆ. ಚಂದದ ಬಗ್ಗೆ ಗಮನ ಸೆಳೆದಾಗ ಜನರು ಅದರ ಬಗ್ಗೆ ಗಮನಹರಿಸುತ್ತಾರೆ. ವಕ್ಫೇ ಜದೀದ್ ಮತ್ತು ತಹ್‌ರೀಕ್ ಜದೀದ್ ಚಂದ ಕೊಡುವ ಜನರ ಸಂಖ್ಯೆ ವರ್ಧಿಸಿರಿ ಎಂದು ನಾನು ಹೇಳಿದಾಗ ಚಂದ ನೀಡುವವರ ಸಂಖ್ಯೆ ವರ್ಧಿಸಿತು. ಅಹ್ಮದೀ ಮಕ್ಕಳಲ್ಲಿ ಸಹ ತ್ಯಾಗ ಮಾಡುವ ಉತ್ಸಾಹ ಕಾಣಿಸುತ್ತಾ ಇದೆ.

ನಕೋರೋ, ಕೀನ್ಯದಿಂದ ಮುರಬ್ಬಿ ಸಾಹಿಬರು ಬರೆಯುತ್ತಾರೆ:

ಅಲ್ಲಿಯ ಸದರ್ ಜಮಾಅತ್ ಅಬೂಬಕ್ಕರ್ ಕೇಬಿ ಸಾಹಿಬರು ಕೀನ್ಯದ ಡಿಫೆನ್ಸ್ ಫೋರ್ಸ್‌ನಲ್ಲಿ ಸರ್ಜಂಟ್ ಆಗಿ ಕೆಲಸಮಾಡುತ್ತಾರೆ. ಇವರು ನಿಷ್ಠಾವಂತ ಅಹ್ಮದಿಯಾಗಿರುವರು.ಮಸೀದಿಯಿಂದ ಬಹಳ ದೂರವಿರುವ ಕೇಂಟ್ ಏರಿಯಾದಲ್ಲಿ ನೆಲೆಸಿರುವರಾದರೂ ನಿಯತವಾಗಿ ದೀರ್ಘವಾದ ಯಾತ್ರೆಮಾಡಿ ಜುಮುಅ ನಮಾಝಿಗೆ ಖಂಡಿತ ಬರುತ್ತಿರುವರು. ತಮ್ಮ ಮೂರು ಹೆಣ್ಮಕ್ಕಳನ್ನು ಜುಮಾಗೆ ಕರಕೊಂಡು ಬರಲು ಪ್ರಯತ್ನಿಸುತ್ತಾರೆ ಮತ್ತು ಕರೆದುಕೊಂಡು ಬರುತ್ತಾರೆ. ಕೇಂಟಿನ ತಮ್ಮ ಮನೆಯಲ್ಲಿ ಎಂ.ಟಿ.ಎ. ಡಿಶನ್ನು ಅಳವಡಿಸಿದ್ದಾರೆ. ಎಂ.ಟಿ.ಎ. ಸ್ವತಃ ನೋಡುತ್ತಾರೆ ಮತ್ತು ತಮ್ಮೊಂದಿಗೆ ಕೆಲಸಮಾಡುವ ಸೈನಿಕರಿಗೆ ಎಂ.ಟಿ.ಎ ಪ್ರೋಗ್ರಾಮ್ ತೋರಿಸುತ್ತಾರೆ. ಮುರಬ್ಬಿ ಸಾಹಿಬರು ಕೆಲವು ಕಾಲದಿಂದ

ಪ್ರತಿ ಖುತ್‌ಬದಲ್ಲಿ ತಹ್‌ರೀಕ್ ಜದೀದಿನ ಪ್ರಾಮುಖ್ಯತೆ ಬಗ್ಗೆ ಹೇಳುತ್ತಿದ್ದರು. ಕೆಲವು ದಿನಗಳ ಮುಂಚೆ ಅವರು ಮುರಬ್ಬಿ ಸಾಹಿಬರೊಂದಿಗೆ ಹೇಳಿದರು: "ನನ್ನ ಮಕ್ಕಳು ಸಹ ಖುತ್‌ಬ ಕೇಳುತ್ತಾರೆ. ಈ ತಿಂಗಳು ಒಬ್ಬ ಅತಿಥಿ ನನ್ನ ಮನೆಗೆ ಬಂದಿದ್ದರು. ವಾಪಸ್ಸು ಹೋಗುವಾಗ ಐದು ವರ್ಷ ಪ್ರಾಯದ ನನ್ನ ಕಿರಿಯ ಮಗಳು ಸಮೀರಾಗೆ ಇಪ್ಪತ್ತೈದು ಶಿಲ್ಲಿಂಗ್ ನೀಡಿದರು. ಅತಿಥಿ ಹೋದಾಗ ಮಗಳು ನನ್ನ ಬಳಿಗೆ ಬಂದು ಇಪ್ಪತ್ತು ಶಿಲ್ಲಿಂಗ್ ನನ್ನ ಕೊಟ್ಟು ಹೇಳಿದಳು: ಇದು ನನ್ನ ವತಿಯಿಂದ ತಹ್‌ರೀಕ್ ಜದೀದ್ ಚಂದಾ ಆಗಿ ಪಾವತಿಸಿರಿ. ಉಳಿದ ಐದು ಶಿಲ್ಲಿಂಗಿಂದ ನಾನು ತಿನ್ನಲ್ಲಿಕ್ಕೆ ಏನಾದರೂ ಖರೀದಿಸುವೆನು."

ಲೈಬೇರಿಯಾದ ಮುಬಲ್ಲಿಗ್ ಸಾಹಿಬರು ಬರೆಯುತ್ತಾರೆ:

"ತಹ್‌ರೀಕ್ ಜದೀದ್ ಚಂದಾ ವಸೂಲು ಮಾಡುವ ವೇಳೆಯಲ್ಲಿ ನಾವು ಮಾಗಿಮಾ ಜಮಾಅತಿನ ಒಂದು ಮನೆಗೆ ತಲುಪಿದೆವು. ತಹ್‌ರೀಕ್ ಜದೀದ್ ಏನೆಂದು ಅವರಿಗೆ ಹೇಳಲಾಯಿತು. ಇದರಲ್ಲಿ ಎಲ್ಲ ಮಕ್ಕಳು ಮತ್ತು ಹಿರಿಯರು ತಮ್ಮ ಸಾಂಪತ್ತಿಕ ಶಕ್ತಿಯಾನುಸಾರ ಭಾಗವಹಿಸಬಹುದು ಎಂದು ಹೇಳಲಾಯಿತು. ಆ ಮನೆಯಲ್ಲಿ ಆರೇಳು ವರ್ಷ ಪ್ರಾಯದ ಒಂದು ಸಣ್ಣ ಹುಡುಗಿ ಇದ್ದಳು. ಅವಳ ಹೆಸರು ಬಿಂಟೋ ಸಮಾವಿರಾ ಎಂದಾಗಿತ್ತು. ಅವಳು ಬುತ್ತಿಗೆಯಲ್ಲಿ ಸಣ್ಣ ಸಣ್ಣ ವಸ್ತುಗಳನ್ನು ಮಾರುತ್ತಿದ್ದಳು. ನಮ್ಮ ಮಾತುಗಳನ್ನು ಕೇಳಿ ಅವಳು ಕೇಳಿದಳು: ಮಕ್ಕಳು ಸ್ವಲ್ಪ ಹಣವನ್ನು ನೀಡಿ ಇದರಲ್ಲಿ ಭಾಗವಹಿಸಬಹುದೇ? ಆಗ ನಾವು ಹೇಳಿದೆವು: ಹೌದು, ಮಕ್ಕಳು ಭಾಗವಹಿಸಬಹುದು. ಇದನ್ನು ಕೇಳಿ ಅವಳು ಓಡುತ್ತಾ ಒಳಗೆಹೋಗಿ ಇಪ್ಪತ್ತು ಲೈಬೇರಿಯನ್ ಡಾಲರ್ ತೆಗೆದುಕೊಂಡು ಬಂದಳು ಮತ್ತು ನನ್ನ ಹತ್ತಿರ ಇದು ಮಾತ್ರವಿದೆ. ನನ್ನನ್ನೂ ಸೇರಿಸಿರಿ ಎಂದು ಹೇಳಿದಳು. ಅವಳ ಮುಗ್ಧವಾದ ಕೃತ್ಯವನ್ನು ನೋಡಿ ಅವಳ ಹೆತ್ತವರು ಸಹ ಚಂದಾ ನೀಡಿದರು."

ದೊಡ್ಡವರಾಗಲಿ ಮಕ್ಕಳಾಗಿರಲಿ ಸಾಂಪತ್ತಿಕ ತ್ಯಾಗಗಳ ಈ ಉದಾಹರಣೆಗಳು ಕೇವಲ ಅಹ್ಮದಿಯರ ವೈಶಿಷ್ಟ್ಯವಾಗಿದೆ. ಲೋಕದ ಯಾವ ಪ್ರದೇಶದವರಾದರೂ ಅವರೆಲ್ಲರ ಸ್ಥಿತಿ ಹೀಗೆಯೇ ಇದೆ. ಮಕ್ಕಳು ಮಾಡುವ ತ್ಯಾಗ ಉತ್ತಮ ಪ್ರಕೃತಿಯ ಧ್ವನಿಯಾಗಿದೆ. ಖಿಯಾಮತ್ ತನಕ ನಮ್ಮ ಜಮಾಅತಿನಲ್ಲಿ ಇಂತಹ ಮಕ್ಕಳು ಮತ್ತು ದೊಡ್ಡವರು ಜನಿಸುವಂತೆ ಅಲ್ಲಾಹನು ಮಾಡಲಿ. ಅವರು ಅಲ್ಲಾಹನಿಗೋಸ್ಕರ ಬಲಿದಾನ ಮಾಡುವ ಉತ್ಸಾಹ ಹೊಂದಿದವರೂ ತಮ್ಮ ಪ್ರತಿಜ್ಞೆಗಳನ್ನು ಈಡೇರಿಸುವವರೂ ಆಗಲಿ.

ನವೆಂಬರ್‌ನಲ್ಲಿ ತಹ್‌ರೀಕ್ ಜದೀದ್ ಚಂದದ ಹೊಸ ವರ್ಷದ ಆರಂಭವನ್ನು ಪ್ರಕಟಿಸಲಾಗುತ್ತದೆ. ನಾನು ಈಗ ತಹ್‌ರೀಕ್ ಜದೀದ್‌ನ 84ನೇ ವರ್ಷದ ಆರಂಭದ ಘೋಷಣೆಯನ್ನು ಮಾಡುತ್ತೇನೆ. ಕಳೆದ ವರ್ಷದ ಕೆಲವು ಅಂಕಿ ಅಂಶಗಳನ್ನು ಸಹ ನೀಡುವೆನು. ತಹ್‌ರೀಕ್ ಜದೀದಿನ 83ನೇ ವರ್ಷ

ಕೊನೆಗೊಂಡು 84ನೇ ವರ್ಷದ ಆರಂಭ ನವೆಂಬರ್ ಒಂದಿನಿಂದ ಆಗಿದೆ. ಇಷ್ಟರ ವರೆಗೆ ಲಭಿಸಿದ ವರದಿ ಪ್ರಕಾರ ಈ ಕಳೆದ ವರ್ಷದ ತಹ್‌ರೀಕ್ ಜದೀದ್ ಪದ್ಧತಿಗೆ ಒಂದು ಕೋಟಿ ಇಪ್ಪತ್ತೈದು ಲಕ್ಷ ಎಂಬತ್ತು ಸಾವಿರ ಪೌಂಡ್ ಸಾಂಪತ್ತಿಕ ದೇಣಿಗೆ ಜಮಾಅತ್ ನೀಡಿದೆ - ಅಲ್‌ಹಮ್‌ದುಲಿಲ್ಲಾಹ್. ಇದು ಕಳೆದ ವರ್ಷದ ವಸೂಲಾದ ಹಣಕ್ಕಿಂತ ಅಲ್ಲಾಹನ ಅನುಗ್ರಹದಿಂದ ಹದಿನೈದು ಲಕ್ಷ 43 ಸಾವಿರ ಪೌಂಡ್‌ನಷ್ಟು ಹೆಚ್ಚಿಗೆ ಇದೆ. ಒಟ್ಟಾರೆ ವಸೂಲಾದ ದೇಶಗಳಲ್ಲಿ ಪಾಕಿಸ್ಥಾನವನ್ನು ಬಿಟ್ಟರೆ, ಜರ್ಮನಿ ಪ್ರಥಮ ಸ್ಥಾನದಲ್ಲಿದೆ, ಎರಡನೆಯ ಸ್ಥಾನ ಬ್ರಿಟನಿಗೆ, ಮೂರನೆಯ ಸ್ಥಾನ ಅಮೇರಿಕಕ್ಕೆ, ನಾಲ್ಕನೆಯ ಸ್ಥಾನ ಕೆನಡಕ್ಕೆ, ಐದನೆಯ ಸ್ಥಾನದಲ್ಲಿ ಭಾರತವಿದೆ. ಆರನೆಯ ಸ್ಥಾನದಲ್ಲಿ ಆಸ್ಟ್ರೇಲಿಯ, ಏಳನೆಯ ಸ್ಥಾನದಲ್ಲಿ ಇಂಡೋನೇಶಿಯಾ, ಎಂಟನೆಯ ಸ್ಥಾನ ಮಧ್ಯಪೂರ್ವದ ಒಂದು ದೇಶ, ಒಂಬತ್ತನೆ ಸ್ಥಾನ ಸಹ ಮಧ್ಯಪೂರ್ವದ ಒಂದು ದೇಶ ಪಡೆದಿದೆ. ಹತ್ತನೆಯ ಸ್ಥಾನದಲ್ಲಿ ಘಾನ ಇದೆ. (ಈ ಹತ್ತು ದೇಶಗಳ ಹತ್ತು ದೊಡ್ಡ ಜಮಾಅತ್‌ಗಳು ಚಂದ ನೀಡಿದ ಪ್ರಕಾರ ಸ್ಥಾನಗಳನ್ನು ಅನುಕ್ರಮವಾಗಿ ಹುಝೂರ್ ವಿವರಿಸಿದರು).

ಭಾಗವಹಿಸುವವರ ಒಟ್ಟು ಸಂಖ್ಯೆಯನ್ನು ವರ್ಧಿಸಲು ನಾನು ಕೆಲವು ವರ್ಷಗಳಿಂದ ಹೇಳುತ್ತಿದ್ದೆ. ಹಣ ಖಂಡಿತ ಬರುತ್ತದೆ. "ಪ್ರತಿಯೊಬ್ಬರಿಂದ ಚಂದಾ ವಸೂಲು ಮಾಡಬೇಕು, ಅದು ಒಂದು ಪೈಸಾ ಆದರೂ ಸರಿ. ಯಾವ ರೀತಿಯಲ್ಲಿ ಹನಿ ಹನಿಯಿಂದ ನದಿಯಾಗುತ್ತದೋ ಅದೇ ರೀತಿಯಲ್ಲಿ ಒಂದೊಂದು ಪೈಸಾಯಿಂದ ಸಾಕಷ್ಟು ಹಣ ಒಟ್ಟಾಗುತ್ತದೆ." ಎಂದು ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿರುವರು.

ಅಲ್ಲಾಹನ ಅನುಗ್ರಹದಿಂದ ಈಗ ಭಾಗವಹಿಸಿದವರ ಸಂಖ್ಯೆ ಹದಿನಾರು ಲಕ್ಷಕ್ಕಿಂತ ಮೇಲೆ ಆಗಿದೆ. ಈ ವರ್ಷ ಎರಡು ಲಕ್ಷ ಜನರು ಹೊಸದಾಗಿ ಭಾಗವಹಿಸಿದ್ದಾರೆ. ಇನ್ನೂ ಬಹಳಷ್ಟು ಜನರನ್ನು ಸೇರಿಸಬಹುದಾಗಿದೆ.

ಭಾರತದ ಹತ್ತು ರಾಜ್ಯಗಳ ಸ್ಥಾನ ಅನುಕ್ರಮವಾಗಿ ಹೀಗೆ ಇವೆ – ಕೇರಳ, ಕರ್ನಾಟಕ, ಜಮ್ಮುಕಾಶ್ಮೀರ, ತೆಲಂಗಾಣ, ತಮಿಳುನಾಡು, ಒರಿಸ್ಸಾ, ಪಂಜಾಬು, ಬಂಗಾಳ, ದೆಹಲಿ ಹಾಗೂ ಮಹಾರಾಷ್ಟ್ರ. ಚಂದ ನೀಡುವುದರಲ್ಲಿ ಅಗ್ರಶ್ರೇಣಿಯಲ್ಲಿರುವ ಹತ್ತು ಪ್ರಮುಖ ಜಮಾಅತ್‌ಗಳು ಅನುಕ್ರಮವಾಗಿ ಇವುಗಳಾಗಿವೆ. ಕೋಝಿಕ್ಕೋಡ್ ಕೇರಳ, ಪತ್ತಪಿರಿಯಂ ಕೇರಳ, ಖಾದಿಯಾನ್, ಹೈದರಾಬಾದ್, ಕೊಲ್ಕತ್ತ, ಬೆಂಗಳೂರು, ಕಣ್ಣೂರ್ ಟೌನ್ ಕೇರಳ, ಪಯಂಗಾಡಿ ಕೇರಳ, ಮಾತೋಟಮ್ ಕೇರಳ, ಹಾಗೂ ಕರುಳಾಯಿ ಕೇರಳ. ಅಲ್ಲಾಹನು ಎಲ್ಲರ ಸಂಪತ್ತಿನಲ್ಲಿಯೂ ಕುಟುಂಬದಲ್ಲಿಯೂ ಅಪರಿಮಿತ ಅನುಗ್ರಹ ಸುರಿಸಲಿ ಎಂದು ಪ್ರಾರ್ಥಿಸುತ್ತೇನೆ.

ನಾನು ಇನ್ನು ಸಂಕ್ಷಿಪ್ತವಾಗಿ ಒಂದು ಹೊಸ ಚಂದದ ಬಗ್ಗೆ ನಿಮ್ಮ ಗಮನ ಹರಿಸಲು ಬಯಸುತ್ತೇನೆ. ಅದು ವಿಶೇಷವಾಗಿ ಯು.ಕೆ.ಯ ಅಹ್ಮದಿಯರೊಂದಿಗೆ

ಮತ್ತು ಲೋಕದ ಇತರ ಭಾಗಗಳಲ್ಲಿರುವ ಸಾಂಪತ್ತಿಕ ಸಾಮರ್ಥ್ಯ ಹೊಂದಿದ ಅಹ್ಮದಿಯರೊಂದಿಗೆ ಮಾಡುವ ಅಪೇಕ್ಷೆಯಾಗಿದೆ. ಅಂದಾಜು ಎರಡು ವರ್ಷಗಳ ಹಿಂದೆ ಮಸ್‌ಜಿದ್ ಬೈತುಲ್ ಫತೂಹ್‌ಗೆ ಸೇರಿದ ಕಟ್ಟಡದ ಒಂದು ಭಾಗಕ್ಕೆ ಬೆಂಕಿ ಹಿಡಿದಿತ್ತು. ಅದರ ಪುನರ್‌ನಿರ್ಮಾಣದ ಯೋಜನೆ ಮಾಡಲಾಗಿದೆ. ಅದು ಬಹಳ ದೊಡ್ಡ ಯೋಜನೆಯಾಗಿದೆ. ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ಅವರು ಸಿದ್ಧಪಡಿಸಿದ ಯೋಜನೆ ಏಳೆಂಟು ಸಾವಿರ ಜನರಿಗೋಸ್ಕರವಾಗಿತ್ತು. ಮಸ್‌ಜಿದ್ ನಿರ್ಮಾಣಗೊಂಡಾಗ ಅದರಲ್ಲಿ ಹಾಲ್‌ಗಳನ್ನು ಸೇರಿಸಿ ಹತ್ತು ಸಾವಿರ ಜನರು ನಮಾಝ್‌ಗೋಸ್ಕರ ಜಮಾಯಿಸಬಹುದಾಗಿತ್ತು. ಆದರೆ ಈ ಸ್ಥಳಾವಕಾಶ ಸಹ ಎರಡು ಮೂರು ವರ್ಷಗಳ ನಂತರ ಸಾಕಾಗಲಿಲ್ಲ. ಆದುದರಿಂದ ಇಲ್ಲಿನ ಆಡಳಿತೆ ವ್ಯವಸ್ಥೆ ಬೇರೆ ಜಮಾಅತ್‌ಗಳಿಂದ ಜನರು ಇಲ್ಲಿಗೆ ಈದ್ ನಮಾಝ್‌ಗೆ ಬರಬಾರದು ತಮ್ಮ ಜಮಾಅತ್‌ಗಳಲ್ಲಿಯೇ ಈದ್ ನಮಾಝ್ ಅನುಷ್ಠಿಸಬೇಕು ಎಂದು ಪ್ರಕಟಿಸಬೇಕಾಯಿತು.

ಈಗ ಆವಶ್ಯಕತೆ ವಿಶಾಲವಾಗಿದೆ. ಎಷ್ಟು ವಿಸ್ತಾರವಾಗಿ ನಿರ್ಮಿಸಲು ಸಾಧ್ಯವೋ ಅಷ್ಟು ವಿಸ್ತಾರವಾಗಿ ನಿರ್ಮಾಣ ಕಾರ್ಯ ಮಾಡಲು ಪ್ರಯತ್ನಿಸಬೇಕಾಗಿದೆ. ಈ ಮಸ್‌ಜಿದ್ ನಿರ್ಮಾಣ ಕಾರ್ಯದಲ್ಲಿ ಮೊದಲು ಭಾಗವಹಿಸದೆ ಇರುವ ಜನರು ಈಗ ಆವಶ್ಯಕವಾಗಿ ಈ ನಿರ್ಮಾಣ ಕಾರ್ಯದಲ್ಲಿ ಭಾಗವಹಿಸಲು ಪ್ರಯತ್ನಿಸಬೇಕಾಗಿದೆ. ಇದು ಯು.ಕೆ. ಜಮಾಅತಿನ ಯೋಜನೆಯಾಗಿದೆ. ಈ ಕೆಲಸದಲ್ಲಿ ಈ ಜಮಾಅತಿನವರು ಭಾಗವಹಿಸಬೇಕಾಗಿದೆ. ಅದೇ ರೀತಿ ಲೋಕದ ಇತರ ಭಾಗಗಳಲ್ಲಿರುವ ಆರ್ಥಿಕವಾಗಿ ಶಕ್ತಿವಂತರಾದವರು ಸಹ ಇದರಲ್ಲಿ ಭಾಗವಹಿಸಬೇಕು. ಶಾಖಾ ಸಂಘಟನೆಗಳು ತಮ್ಮ ಶಕ್ತಿಯನುಸಾರವಾಗಿ, ಜಮಾಅತ್‌ಗಳು ತಮ್ಮ ಶಕ್ತಿಗೆ ಅನುಸಾರವಾಗಿ ಮತ್ತು ದೊಡ್ಡ ದೊಡ್ಡ ಜಮಾಅತ್‌ಗಳು ಈ ಕೆಲಸದಲ್ಲಿ ಭಾಗವಹಿಸಬೇಕು. ಇಲ್ಲಿಗೆ ವರ್ಷವಿಡೀ ಅತಿಥಿಗಳು ಆಗಮಿಸುತ್ತಾ ಇದ್ದಾರೆ. ಯು.ಕೆ. ಜಮಾಅತ್ ಪ್ರತಿ ತಿಂಗಳು ಅತಿಥಿ ಸತ್ಕಾರ ಮಾಡುತ್ತಿದೆ. ಅತಿಥಿಗಳ ಸಂಖ್ಯೆ ಈಗ ಸಾವಿರಗಳಿಗೆ ತಲಪಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸಂದರ್ಭದಲ್ಲಿ ಹೀಗೆ ಹೇಳಿದರು:

> ಆಲಂಗೀರ್ ಬಾದಶಹನ ಕಾಲದಲ್ಲಿ ಶಾಹಿ ಮಸ್‌ಜಿದ್‌ಗೆ ಬೆಂಕಿ ಹಿಡಿದಾಗ ಜನರು ಓಡುತ್ತಾ ಬಾದಶಹರ ಸಮೀಪಕ್ಕೆ ಬಂದು ಮಸ್‌ಜಿದ್‌ಗೆ ಬೆಂಕಿ ಹಿಡಿದಿದೆ ಎಂದು ಹೇಳಿದರು. ಆಗ ಬಾದಶಹ ಸುಜೂದ್ ಮಾಡಿ ಕೃತಜ್ಞತೆ ಅರ್ಪಿಸಿದರು. ಆಗ ಆಸ್ಥಾನಿಕರು ಆಶ್ಚರ್ಯಚಕಿತರಾಗಿ "ಹುಝೂರ್ ಇದು ಕೃತಜ್ಞತೆ ಅರ್ಪಿಸುವ ಸಂದರ್ಭವೇ? ಅಲ್ಲಾಹನ ಭವನಕ್ಕೆ ಬೆಂಕಿ ಹಿಡಿದಿದೆ ಮತ್ತು ಮುಸ್ಲಿಮರ ಹೃದಯಗಳಿಗೆ ಬಹಳ ದುಃಖವಾಗಿದೆ." ಎಂದು ಹೇಳಿದರು. ಆಗ ಬಾದಶಹ ಹೇಳಿದರು: "ಇಷ್ಟು ದೊಡ್ಡ ಮಸ್‌ಜಿದ್ ನಿರ್ಮಿಸಲಾಗಿದೆ. ಈ ಭವನದ ಮೂಲಕ ಸಾವಿರಾರು ಜನರು ಲಾಭ

ಪಡೆಯುತ್ತಿದ್ದಾರೆ. ಇದರ ನಿರ್ಮಾಣದಲ್ಲಿ ನನ್ನದಾದ ಯಾವುದಾದರೂ ಒಂದು ಪಾತ್ರವಿದ್ದರೆ ಎಷ್ಟು ಚೆನ್ನಾಗಿತ್ತು ಎಂದು ನಾನು ಯೋಚಿಸುತ್ತಿದ್ದೆ. ನಾನು ಈ ಭವನ ಬಹಳ ಪರಿಪೂರ್ಣವಾಗಿರುವುದಾಗಿ ಮತ್ತು ಯಾವುದೇ ನ್ಯೂನತೆ ರಹಿತವಾಗಿ ಇರುವುದನ್ನು ನೋಡಿದೆನು. ನನಗೆ ಪುಣ್ಯ ದೊರಕುವ ಯಾವ ಕೆಲಸ ಮಾಡಬಲ್ಲೆ ಎಂದು ನಾನು ಯೋಚಿಸಿ ನಿಟ್ಟುಸಿರು ಬಿಡುತ್ತಿದ್ದೆ. ಈ ದಿನ ಅಲ್ಲಾಹನು ನನಗೆ ಪುಣ್ಯ ದೊರಕಿಸಿ ಕೊಡುವ ಒಂದು ಮಾರ್ಗ ತೆರೆದಿದ್ದಾನೆ. ಅಲ್ಲಾಹನು ಆಲಿಸುವವನೂ ಸರ್ವಜ್ಞನೂ ಆಗಿದ್ದಾನೆ."

**(ಮಲ್‌ಫೂಝಾತ್, ಭಾಗ 1, ಪುಟ 387)**

ಆದುದರಿಂದ ಈ ಮಸ್‌ಜಿದ್ ನಿರ್ಮಾಣದಲ್ಲಿ ಹಿಂದೆ ಭಾಗವಹಿಸದೆ ಇದ್ದವರು ಆವಶ್ಯಕವಾಗಿಯೂ ಈಗ ಭಾಗವಹಿಸಬೇಕು. ನೀವು ವಾಗ್ದಾನ ಮಾಡುವ ಹಣವನ್ನು ಮೂರು ವರ್ಷಗಳಲ್ಲಿ ಪಾವತಿಸಬಹುದು. ಆದರೆ ಕನಿಷ್ಠ ತಮ್ಮ ವಾಗ್ದಾನದ ಮೂರನೆಯ ಒಂದು ಭಾಗ ಮೊದಲನೆ ವರ್ಷದಲ್ಲಿ ಆವಶ್ಯಕವಾಗಿಯೂ ಪಾವತಿಸಬೇಕು. ಅಲ್ಲಾಹನು ಅನುಗ್ರಹಿಸಲಿ. ಯು.ಕೆ. ಜಮಾಅತಿಗೆ ಈ ಯೋಜನೆಯನ್ನು ಪೂರ್ಣಗೊಳಿಸುವ ಸೌಭಾಗ್ಯವನ್ನು ಅಲ್ಲಾಹನು ನೀಡಲಿ – ಆಮೀನ್.

––––––––––––––*****––––––––––––––